# 4 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ, ಮೈಸೂರು

ಎಸ್‌ಸಿ. 251/2021

| | | | |
|---|---|---|---|
| ಸಾಕ್ಷಿದಾರರ ಹೆಸರು | ಃ ಶ್ರೀ ಪ್ರತಾಪ್ | | ಪ್ರಮಾಣ ಮಾಡಿಸಿದ ದಿನಾಂಕಃ |
| ತಂದೆ/ಗಂಡನ ಹೆಸರು | ಃ ಶ್ರೀ ಶಿವರಾಜಪ್ಪ | | 18.04.2024 |
| ವಯಸ್ಸು | ಃ 31 ವರ್ಷ | | |
| ವೃತ್ತಿ | ಃ ಬೇಕರಿ ಕೆಲಸ | | ಪ್ರಾ.ಸಾ. ಃ 10 |
| ವಾಸಸ್ಥಳ | ಃ ಗೌಡರಹುಂಡಿ | | ಚಾ.ಸಾ. ಃ 06 |

**ಮುಖ್ಯ ವಿಚಾರಣೆ ಃ ಸರ್ಕಾರಿ ಅಭಿಯೋಜಕರಿಂದಃ**

. ಮೃತ ಶಿವರಾಜಪ್ಪ ನನ್ನ ತಂದೆಯಿರುತ್ತಾರೆ. ಚಾ.ಸಾ-*1* ಪವನ್ ಕುಮಾರ್ ನನ್ನ ಅಣ್ಣ ಇರುತ್ತಾರೆ. ಚಾ.ಸಾ-*11* ಮತ್ತು *12* ನನ್ನ ತಂದೆಯ ಅಣ್ಣನಿರುತ್ತಾರೆ. ಚಾ.ಸಾ-*13* ಮತ್ತು *14* ನಮ್ಮ ಗ್ರಾಮದವರೇ ಇರುತ್ತಾರೆ. ದಿಃ*28.05.2021* ರಂದು ನನ್ನ ತಂದೆ ಕಾಣೆಯಾಗಿದ್ದರು. ಆ ದಿನ ನನ್ನ ತಂದೆ ಚಾ.ಸಾ-*13* ಗೌರಮ್ಮ ಇವರ ಮನೆ ಬಳಿ ಇದ್ದಾಗ ಸಂಜೆ *4.30* ರ ಸಮಯದಲ್ಲಿ ಅವರನ್ನು *1* ನೇ ಆರೋಪಿತ ಶರತ್ ಕುಮಾರ್ ಇವರು *5* ನಿಮಿಷ ಬನ್ನಿ ಎಂದು ಕರೆದುಕೊಂಡು ಹೋಗಿದ್ದರು. ಆ ದಿನ ನನ್ನ ತಂದೆ ತನ್ನ ಮೊಬೈಲ್ ಅನ್ನು ಗೌರಮ್ಮನ ಮನೆಯಲ್ಲಿ ಚಾರ್ಜಿಂಗ್ ಗೆ ಹಾಕಿ ಅಲ್ಲಿಯೇ ಬಿಟ್ಟು ಶರತ್ ಕುಮಾರ್ ಜೊತೆ ಹೋಗಿದ್ದರು. ಗೌರಮ್ಮ ಮತ್ತು ಅವರ ಮಗಳು ಶರತ್ ಕುಮಾರ್ ನೇ ನನ್ನ ತಂದೆಯನ್ನು ಕರೆದುಕೊಂಡು ಹೋದ ಬಗ್ಗೆ ಹೇಳಿದ್ದರು. ಆ ದಿನ ರಾತ್ರಿ *8* ಗಂಟೆ ವೇಳೆಯಲ್ಲಿ ನನ್ನ ಅಣ್ಣ ನನಗೆ ಫೋನ್ ಮಾಡಿ ನನ್ನ ತಂದೆ ಕಾಣದೇ ಇದ್ದ ಬಗ್ಗೆ ಹೇಳಿದ್ದರು ಆಗ ನಾನು ನನ್ನ ತಂದೆಯ ನಂಬರ್ ಗೆ ಫೋನ್ ಮಾಡಿದಾಗ ಅದು ಗೌರಮ್ಮನ ಮನೆಯಲ್ಲಿತ್ತು. ಆಗ ನಾನು ಗೌರಮ್ಮನ ಮನೆಗೆ ಹೋಗಿ ಕೇಳಿದಾಗ ಅವರು

ನನ್ನ ತಂದೆ ಮೊಬೈಲ್ ಅನ್ನು ಚಾರ್ಜ್ ಹಾಕಿ ಶರತ್ ಕುಮಾರ್ ರವರ ಜೊತೆ ಹೋಗಿದ್ದ ಬಗ್ಗೆ ಹೇಳಿದ್ದರು. ಆಗ ನಾನು ಶರತ್ ಕುಮಾರ್ ರವರಿಗೆ ಫೋನ್ ಮಾಡಿದಾಗ ಅವರು ನಾನು ಸ್ನಾನ ಮಾಡುತ್ತಿದ್ದೇನೆ ನಿಮ್ಮ ತಂದೆಯವರು ಎಲ್ಲಿ ಹೋಗಿದ್ದಾರೆ ನನಗೆ ಗೊತ್ತಿಲ್ಲ ಎಂದು ಹೇಳಿದ್ದರು. ಆ ಕಾಲಕ್ಕೆ ರಾತ್ರಿ *8.30* ಗಂಟೆ ಆಗಿತ್ತು. ಆ ನಂತರ ನಾನು ಶರತ್ ಕುಮಾರ್ ಇವರ ಮನೆ ಹೋದಾಗ ಶರತ್ ಕುಮಾರ್ ಇವರು ತುಂಬಾ ಕಳವಳದಲ್ಲಿ ಇದ್ದರು ಮತ್ತು ಸಂಜೆ *5* ಗಂಟೆ ನಂತರ ನಿಮ್ಮ ತಂದೆಯನ್ನು ನಾನು ನೋಡಿಲ್ಲ ಎಂದು ಹೇಳಿದ್ದರು. ಆ ನಂತರ ನಾನು ವಾಪಸ್ಸು ನಮ್ಮ ಮನೆಗೆ ಬಂದರು. ಆ ಕಾಲಕ್ಕೆ ನಮ್ಮ ಮನೆ ಬಳಿ ಬಂದು ಬಾಯಿ ಬಡಿದುಕೊಂಡು ನಿಮ್ಮ ತಂದೆಯನ್ನು ತೀರಿಸಿಹಾಕಿದ್ದಾರೆ ಎಂದು ಹೇಳಿದ್ದರು. ಆಗ ನಮಗೆ ಶರತ್ ಕುಮಾರ್ ಮೇಲೆ ನಂಬಿಕೆ ಇದುದ್ದರಿಂದ ನಮ್ಮ ತಂದೆ ಎಲ್ಲಿಯೋ ಹೋಗಿರಬಹುದು ಎಂದು ಸುಮ್ಮನಿದ್ದೆವು. ಆ ದಿನ ರಾತ್ರಿ ತುಂಬಾ ಹುಡುಕಾಡಿದ್ದೆವು.

*2.* ಮರುದಿನ ಬೆಳಗ್ಗೆ ಶರತ್ ಕುಮಾರ್ ಇವರ ತಮ್ಮ ಸುದರ್ಶನ್, ಶರತ್ ಕುಮಾರ್ ಮತ್ತು ಅವರ ಅಕ್ಕ ಇವರನ್ನು ಸೇರಿಸಿ ಗ್ರಾಮದ ಮುಖಂಡರು ಪಂಚಾಯಿತಿ ಮಾಡಿದ್ದರು. ಆಗ ಶರತ್ ಕುಮಾರ್ ಇವರನ್ನು ಏನು ಮಾಡಿದ್ದೀಯಾ ಎಂದು ಕೇಳಿದಾಗ ಅವರು ನೀವು ನನ್ನನ್ನು ಏನು ಮಾಡಿಕೊಳ್ಳಲು ಆಗುವುದಿಲ್ಲ ನನ್ನ ತಮ್ಮ ಲಾಯರ್ ಇದ್ದಾನೆ ಎಂದು ಹೇಳಿದ್ದರು. ಆ ಕಾಲಕ್ಕೆ ಮಲ್ಲಿಗಮ್ಮನಿಗೂ ಸುದರ್ಶನ್ ನಿಗೂ ವಾಗ್ವಾದಾ ನಡೆದಿತ್ತು. ಆ ನಂತರ ನನ್ನ ಅಣ್ಣ ದಿಃ*30.05.2021* ರಂದು ನನ್ನ ತಂದೆಯನ್ನು ಕರೆದುಕೊಂಡು ಹೋಗಿ ಏನೋ ಮಾಡಿದ್ದಾರೆ ಎಂದು ದೂರು ಕೊಟ್ಟಿದ್ದರು. ನಂತರ ನಾವು ಅಲ್ಲಲ್ಲಿ ಹುಡುಕಾಡಿ ಪುನಃ ಶರತ್ ಕುಮಾರ್ ಇವರ ಮನೆಗೆ ಹೋಗಿ ಕೇಳಿದಾಗ ಶರತ್ ಕುಮಾರ್ ಇವರ ಅಕ್ಕನ ಮಗಳಿಗೆ ಮೈಮೇಲೆ ದೇವರು ಬಂದು

ಇಲ್ಲಿಯೇ ಇದ್ದಾನೆ ಬರುತ್ತಾನೆ ಏನು ಆಗಿಲ್ಲ ಎಂದು ಹೇಳಿದ್ದರು. ನಂತರ *6* ದಿನಗಳ ಬಳಿಕ ನನ್ನ ತಂದೆಯ ಶವ ರಾಮಪುರ ನಾಲೆಯಲ್ಲಿ ದೊರೆತಿತ್ತು. ಆ ಕಾಲಕ್ಕೆ ನನ್ನ ತಂದೆಯ ತಲೆಯ ಹಿಂಭಾಗಕ್ಕೆ ಮತ್ತು ಹಿಮ್ಮಡಿಗಳಿಗೆ ಗಾಯಗಳಾಗಿದ್ದವು.

*3.* ಮಲ್ಲಿಗಮ್ಮ ಮತ್ತು ಶರತ್ ಕುಮಾರ್ ಅನೈತಿಕ ಸಂಬಂದ ಹೊಂದಿದ್ದು ನನ್ನ ಅಣ್ಣ ಪವನ್ ಕುಮಾರ್ ಮಲ್ಲಿಗಮ್ಮನ ಮಗಳನ್ನು ಪ್ರೀತಿಸಿ ಮದುವೆಯಾಗಲು ಇಚ್ಚಿಸಿದ್ದ ಕಾರಣ ಅವರು ಮದುವೆಯಾದಲ್ಲಿ ತಮ್ಮಿಬ್ಬರ ಅನೈತಿಕ ಸಂಬಂದಕ್ಕೆ ತೊಂದರೆಯಾಗುತ್ತದೆ ಎನ್ನುವ ಕಾರಣಕ್ಕೊ ಮಲ್ಲಿಗಮ್ಮಳ ದನಗಳ್ಳಿ ಗ್ರಾಮದ ಆಸ್ತಿಯನ್ನು ಹೊಡೆದುಕೊಳ್ಳುತ್ತಾರೆ ಎನ್ನುವ ಕಾರಣಕ್ಕೋ ಶರತ್ ಕುಮಾರ್ ಇವರು ನನ್ನ ತಂದೆಯನ್ನು ಕೊಲೆ ಮಾಡಿದ್ದಾರೆ. ಅದಕ್ಕೂ ಮೊದಲೇ ಶರತ್ ಕುಮಾರ್, ಸುದರ್ಶನ್ ಮತ್ತು ಅವರ ಅಕ್ಕ ಸೇರಿ ಮುಂದಾಳತ್ವ ವಹಿಸಿ ಮಲ್ಲಿಗಮ್ಮಳ ಮಗಳು ಪ್ರೀತಿ ಮತ್ತು ಪವನ್ ಕುಮಾರ್ ಮದುವೆ ಮಾಡಲು ನಿಶ್ಚಯಿಸಿ ಕಲ್ಯಾಣ ಮಂಟಪವನ್ನು ಬುಕ್ ಮಾಡಿದ್ದರು ಆದರೆ ಕರೋನಾ ಬಂದಿದ್ದರಿಂದ ಮದುವೆ ಮುಂದಕ್ಕೆ ಹೋಗಿತ್ತು. ನನ್ನ ತಂದೆಯೂ ಸಹ ಅವರಿಬ್ಬರ ಮದುವೆ ಮಾಡಬೇಕು ಎಂದು ಇಚ್ಛೆ ಹೊಂದಿದ್ದರು. ಆ ಕಾಲಕ್ಕೆ ಗ್ರಾಮದ ಹಿರಿಯರಾದ ಬಸವಣ್ಣ ಇವರು ಮದುವೆ ಮಾತುಕತೆ ಮುಂದಾಳತ್ವ ವಹಿಸಿದ್ದರು.

*4.* ನನ್ನ ತಂದೆ ಶವ ದೊರೆತಾಗ ನಾನು ಆ ಸ್ಥಳಕ್ಕೆ ಹೋಗಿದ್ದೆ ಆ ಕಾಲಕ್ಕೆ ನನ್ನ ತಂದೆಯ ದೇಹವನ್ನು ಯಾರೋ ಒಬ್ಬ ಮುಸ್ಲಿಂ ವ್ಯಕ್ತಿಯ ಮೂಲಕ ನಾಲೆಯಿಂದ ತೆಗೆಸಿದ್ದರು. ಆ ಕಾಲಕ್ಕೆ ನನ್ನ ತಂದೆಯ ದೇಹದ ಮೇಲೆ ಒಂದು ಪಟಾಪಟಿ ಚಡ್ಡಿ ಮಾತ್ರ ಇತ್ತು. ಆ ದೇಹ ದೊರೆತ ಬಳಿಕ ಅದನ್ನು ಶವ ಪರೀಕ್ಷೆಗೆ ಕೆ.ಆರ್. ಆಸ್ಪತ್ರೆಗೆ ಕಳುಹಿಸಿದ್ದರು. ಆ ಕಾಲಕ್ಕೆ ಶವ ಪಂಚನಾಮೆ ಕಾಲಕ್ಕೆ

ನಮ್ಮ ಗ್ರಾಮದ ವ್ಯಕ್ತಿಗಳಾದ ಸೋಮಣ್ಣ, ಮಹೇಶ, ಗಿರಿಯಯ್ಯ, ವೃಷಬೇಂದ್ರ ಮತ್ತು ಇತರರು ಹಾಜರಿದ್ದರು. ಆ ಕಾಲಕ್ಕೆ ನಾನು ಹೇಳಿಕೆಯನ್ನು ಕೊಟ್ಟಿದ್ದೇನೆ. ನನ್ನ ತಂದೆಯ ನಿಕ್ಕರ್ ಅನ್ನು ನೋಡಿದರೆ ಗುರುತಿಸುತ್ತೇನೆ. ಈಗ ನಾನು ನೋಡುತ್ತಿರುವ ಎಂ.ಒ *4* ನಿಕ್ಕರ್ ಅದೇ ಇರುತ್ತದೆ. ನನ್ನ ತಂದೆ ಶವ ದೊರೆತ ಕಾಲಕ್ಕೆ ಪೋಲೀಸರು ಶರತ್ ಕುಮಾರ್, ಸುದರ್ಶನ್ ಮತ್ತು ಈ ಪ್ರಕರಣದ *3* ನೇ ಆರೋಪಿತ ಮದುವನ್ನು ಪೋ.ಠಾಣೆಯಲ್ಲಿ ಕೂರಿಸಿಕೊಂಡಿದ್ದರು. ಆ ಕಾಲಕ್ಕೆ ಶರತ್ ಕುಮಾರ್, ಮದು ಮತ್ತು ಮಲ್ಲಿಗಮ್ಮ ತಾವೇ ಕೊಲೆ ಮಾಡಿದ್ದಾಗಿ ಒಪ್ಪಿಕೊಂಡಿದ್ದರು.

*5.* ದಿಃ*07.06.2021* ರಂದು ಪೋಲೀಸರು ಶರತ್ ಕುಮಾರ್ ನನ್ನು ಕಣ್ಣಿಗೆ ಬಟ್ಟೆ ಕಟ್ಟಿ ಪೋ.ಠಾಣೆಗೆ ಕರೆದುಕೊಂಡು ಬಂದಿದ್ದರು. ಶರತ್ ಕುಮಾರ್ ಇವರು ನನ್ನ ಸಂಬಂದಕ್ಕೆ ತೊಂದರೆಯಾಗುತ್ತದೆ ಎನ್ನುವ ಕಾರಣಕ್ಕೆ ನಾನೇ ಜಮೀನಿಗೆ ಕರೆದುಕೊಂಡು ಹೋಗಿ ಕೊಲೆ ಮಾಡಿದ್ದೇನೆ, ನಂತರ ನನಗೆ ಒಬ್ಬನಿಗೆ ದೇಹ ಎತ್ತಲು ಆಗುವುದಿಲ್ಲ ಎನ್ನುವ ಕಾರಣಕ್ಕೆ ಮದು ಕುಮಾರನ ಸಹಾಯ ಪಡೆದು ದೇಹವನ್ನು ಮತ್ತು ಹೊಡೆಯಲು ಉಪಯೋಗಿಸಿದ್ದ ಕುಡುಗೋಲು, ಆ್ಯಂಗುಲರ್ ಅನ್ನು ಟ್ರಾಕ್ಟರ್ ನಲ್ಲಿ ತೆಗೆದುಕೊಂಡು ಹೋಗಿ ರಾಮಪುರ ನಾಲೆಗೆ ಹಾಕಿರುವುದಾಗಿ ಹೇಳಿದ್ದರು. ಕಾಲುವೆಗೆ ಹಾಕುವ ಕಾಲಕ್ಕೆ ದೆವ್ವ ಆಗಬಾರದು ಎನ್ನುವ ಉದ್ದೇಶದಿಂದ ನನ್ನ ತಂದೆಯ ಹಿಮ್ಮಡಿಗಳನ್ನು ಕತ್ತರಿಸಿದ್ದಾಗಿ ಸಹ ಹೇಳಿದ್ದರು. ಟ್ರಾಕ್ಟರ್ ಮತ್ತು ಡಿಸ್ಕವರಿ ಬೈಕ್ ಅನ್ನು ಜಪ್ತಿ ಮಾಡಿದ್ದರು. ಬೈಕ್ ಅನ್ನು ನನ್ನ ತಂದೆಯನ್ನು ಜಮೀನಿಗೆ ಕರೆದುಕೊಂಡು ಹೋಗುವಾಗ ಉಪಯೋಗಿಸಿದ್ದ ಕಾರಣ ಅದನ್ನು ಸಹ ಜಪ್ತಿ ಮಾಡಿದ್ದರು.

*6.* ಶರತ್ ಕುಮಾರ್ ಇವರೇ ಆ್ಯಂಗುಲರ್ ಮತ್ತು ಕುಡುಗೋಲನ್ನು ಬಿಸಾಕಿದ ಸ್ಥಳವನ್ನು ತೋರಿಸಿದ್ದರು ಅವುಗಳನ್ನು ಸಹ ಪೋಲೀಸರು ಅಮಾನತ್ತು ಪಡಿಸಿಕೊಂಡಿದ್ದರು. ಆ

ಸ್ಥಳದಲ್ಲಿ ಒಂದ ಪಂಚೆಯು ಸಹ ದೊರೆತಿದ್ದು ಅದನ್ನು ಸಹ ಅಮಾನತ್ತು ಪಡಿಸಿಕೊಂಡಿದ್ದರು. ಈಗ ನಾನು ನೋಡುತ್ತಿರುವ ಎಂ.ಒ *1* ರಿಂದ *3* ಪೋಲೀಸರು ಅಮಾನತ್ತು ಪಡಿಸಿಕೊಂಡಿದ್ದ ಆ ಕುಡುಗೋಲು, ಆ್ಯಂಗುಲರ್ ಮತ್ತು ಪಂಚೆ ಇರುತ್ತವೆ. ಈಗ ನಾನು ನೋಡುತ್ತಿರುವ ನಿ.ಪಿ-*13* ರಿಂದ *17* ಪೊಟೋಗಳಲ್ಲಿ ಕಾಣುವ ಟ್ರಾಕ್ಟರ್ ಅದೇ ಇರುತ್ತದೆ. ಈಗ ನಾನು ನೋಡುತ್ತಿರುವ ಇನ್ನೊಂದು ಪೊಟೋದಲ್ಲಿ ಕಾಣುವ ಬೈಕ್ ನನ್ನ ತಂದೆಯನ್ನು ಕರೆದುಕೊಂಡು ಹೋಗಿದ್ದ ಬೈಕ್ ಇರುತ್ತದೆ. ಸದರಿ ಪೊಟೋವನ್ನು ನಿ.ಪಿ-*18* ಎಂದು ಗುರುತಿಸಿದೆ. ಟ್ರಾಕ್ಟರ್ ಮತ್ತು ಬೈಕ್ ಅನ್ನು ಶರತ್ ಕುಮಾರ್ ಇವರೇ ತೋರಿಸಿದ್ದು ಅವುಗಳನ್ನು ಅವರ ಮನೆ ಬಳಿಯಿಂದ ಅಮಾನತ್ತುಪಡಿಸಿಕೊಂಡಿದ್ದರು. ಮಲ್ಲಿಗಮ್ಮ ಶರತ್ ಕುಮಾರ್ ಇವರಿಗೆ ಶಿವರಾಜಪ್ಪನನ್ನು ಮುಗಿಸಿಬಿಡು ಇಲ್ಲವಾದರೇ ನಾನೇ ಆತ್ಮಹತ್ಯೆ ಮಾಡಿಕೊಳ್ಳುತ್ತೇನೆ ಎಂದು ಹೇಳುತ್ತಿದುದ್ದಾಗಿ ನನಗೆ ಗೊತ್ತಾಗಿದೆ. ಈ ಎಲ್ಲಾ ವಿಷಯದ ಬಗ್ಗೆ ಪೋಲೀಸರ ಮುಂದೆ ಹೇಳಿಕೆ ಕೊಟ್ಟಿದ್ದೇನೆ.

<u>ಪಾಟೀ ಸವಾಲು : 1 ನೇ ಆರೋಪಿ ಪರ ವಕೀಲರಾದ ಶ್ರೀ ಸಿ.ಎಂ.ಜೆ ರವರಿಂದಃ-</u>

*7.* ನನ್ನ ತಂದೆ ಕಾಣೆಯಾಗಿದ್ದ ದಿನ ನಾನು ಗ್ರಾಮದಲ್ಲೇ ಇದ್ದೆ. ನನ್ನ ಅಣ್ಣನು ಸಹ ಗ್ರಾಮದಲ್ಲೇ ಇದ್ದ. ಆ ದಿನ ನನ್ನ ತಂದೆ ಸಂಜೆ *4* ಗಂಟೆ ವೇಳೆಗೆ ನಮ್ಮ ಮನೆಯಿಂದ ಹೊರಟಿದ್ದರು *4.30* ಕ್ಕೆ ಗೌರಮ್ಮನ ಮನೆಯಲ್ಲಿದ್ದರು. ಆ ದಿನ ನಾನು ನನ್ನ ತಂದೆಯನ್ನು ಹಿಂಬಾಲಿಸಿಕೊಂಡು ಹೋಗಿಲ್ಲ. ರಾತ್ರಿ *8* ರಿಂದ *8.30* ಕ್ಕೆ ನನ್ನ ತಂದೆ ಕಾಣೆಯಾಗಿದ್ದಾರೆ ಎಂದು ಗೊತ್ತಾಗಿತ್ತು. ಆ ಕಾಲಕ್ಕೆ ನನ್ನ ಅಣ್ಣ ಅಪ್ಪ ಕಾಣುತ್ತಿಲ್ಲ ಎಂದು ನನಗೆ ಪೋನ್ ನಲ್ಲಿ ಹೇಳಿದ್ದ. ಆ ರೀತಿ ಹೇಳಿದಾಗ ನಾನು ನನ್ನ ಚಿಕ್ಕಪ್ಪ ಶಾಂತಪ್ಪನ ಮನೆಯಲ್ಲಿದ್ದೆ. ನನ್ನ ಚಿಕ್ಕಪ್ಪನ ಮನೆ ನಮ್ಮ ಮನೆಯಿಂದ

500 ಮೀ ದೂರವಿದೆ. ಚಾ.ಸಾ-12 ಸುರೇಶ ನಮ್ಮೊಂದಿಗೆ ವಾಸವಿದ್ದಾರೆ. ನನ್ನ ತಂದೆ ಕಾಣೆಯಾಗುವುದಕ್ಕಿಂತ ಮೊದಲು ನನ್ನ ತಂದೆ ಮತ್ತು ಶರತ್ ಕುಮಾರ್ ನಡುವೆ ಯಾವುದೇ ಗಲಾಟೆ ಆಗಿರಲಿಲ್ಲ ಎಂದರೆ ನಿಜ. ಸುದರ್ಶನ್ ಮತ್ತು ಅವರ ಅಕ್ಕನ ಜೊತೆ ಸಹ ನನ್ನ ತಂದೆಗೆ ಭಿನ್ನಾಭಿಪ್ರಾಯ ಅಥವಾ ದ್ವೇಷ ಇರಲಿಲ್ಲ ಎಂದರೆ ನಿಜ. ನನ್ನ ತಂದೆ 4 ಗಂಟೆಗೆ ಮನೆಯಿಂದ ಹೊರಟು 4.30 ಕ್ಕೆ ಗೌರಮ್ಮನ ಮನೆಯಲ್ಲಿದ್ದರು ಎಂದು ಪೋಲೀಸರು ಮುಂದೆ ಹೇಳಿದ್ದೇನೆ. ಗೌರಮ್ಮ ಮತ್ತು ರತ್ನಮ್ಮ ನಮ್ಮ ಸಂಬಂಧಿಗಳಲ್ಲ ಎಂದರೆ ನಿಜ. ರತ್ನಮ್ಮಳಿಗೆ ಮದುವೆಯಾಗಿಲ್ಲ. ಅವರು ಅಂಗವಿಕಲೆ ಇದ್ದಾರೆ.

8. ನನ್ನ ತಂದೆ ಗೌರಮ್ಮನ ಮನೆಯಲ್ಲಿ ಮೊಬೈಲ್ ಚಾರ್ಜ್ ಗೆ ಹಾಕಿ ಶರತ್ ಕುಮಾರ್ ಜೊತೆ ಬೈಕ್ ನಲ್ಲಿ ಹೋದ ಬಗ್ಗೆ ಪೋಲೀಸರ ಮುಂದೆ ಹೇಳಿಲ್ಲ ಎಂದರೆ ಸರಿಯಲ್ಲ. ನನ್ನ ಅಣ್ಣ ಪೋನ್ ಮಾಡಿದ ಬಳಿಕ ನಾನು ಗೌರಮ್ಮನ ಮನೆಗೆ ಹೋಗಿ ಕೇಳಿದ್ದೆ ಮತ್ತು ಅವರು ನನ್ನ ತಂದೆ ಶರತ್ ಕುಮಾರ್ ಅವರ ಜೊತೆ ಹೋದ ಬಗ್ಗೆ ಹೇಳಿದ್ದರು ಎಂದು ಇದೇ ಮೊದಲ ಬಾರಿಗೆ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆ ಕಾಲಕ್ಕೆ ನಾನು ಶರತ್ ಕುಮಾರ್ ಗೆ ಪೋನ್ ಮಾಡಿ ಹೇಳಿದಾಗ ಅವರು ಗೊತ್ತಿಲ್ಲ ಎಂದು ಹೇಳಿದ ಬಗ್ಗೆ ಸಹ ಇದೇ ಮೊದಲ ಬಾರಿಗೆ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಂತರ ನಾನು ಶರತ್ ಕುಮಾರ್ ಅವರ ಮನೆ ಬಳಿ ಹೋದಾಗ ಅವರು ಗಾಬರಿಯಾಗಿದ್ದರು ಮತ್ತು ಸಂಜೆ 5 ರ ಬಳಿಕ ನನ್ನ ತಂದೆಯನ್ನು ನೋಡಿಲ್ಲ ಎಂದು ಪೋಲೀಸರ ಮುಂದೆ ಹೇಳಿಲ್ಲ ಎಂದರೆ ಸರಿಯಲ್ಲ. ಆ ನಂತರ ಮಲ್ಲಿಗಮ್ಮ ನಮ್ಮ ಮನೆಗೆ ಬಂದು ನಿಮ್ಮ ತಂದೆಯನ್ನು ತೀರಿಸಿಬಿಟ್ಟಿದ್ದಾರೆ ಎಂದು ಹೇಳಿದ ಬಗ್ಗೆ ಪೋಲೀಸರ ಮುಂದೆ ಹೇಳಿಲ್ಲ ಎಂದರೆ ಸರಿಯಲ್ಲ. ನಾನು ಗೌರಮ್ಮನ ಮನೆ ಬಳಿ ಹೋಗಿದ್ದಾಗ ನನ್ನ ಜೊತೆ ಬೇರೆ ಯಾರು

ಇರಲಿಲ್ಲ. ಆ ದಿನ ಶರತ್ ಕುಮಾರ್ ಮನೆ ಬಳಿ ನಾನು ಮತ್ತು ನನ್ನ ಅಣ್ಣ ಹೋಗಿದ್ದೆವು. ಮಲ್ಲಿಗಮ್ಮ ನಮ್ಮ ಮನೆ ಬಳಿ ಬಂದಾಗ ರಾತ್ರಿ *9.30* ಆಗಿತ್ತು ಆ ಕಾಲಕ್ಕೆ ಗ್ರಾಮಸ್ಥರು ತುಂಬಾ ಜನ ಸೇರಿದ್ದರು. ಆ ಕಾಲಕ್ಕೆ ಚಾ.ಸಾ–*11* ಮತ್ತು *12* ಸಹ ಹಾಜರಿದ್ದರು.

*9.* ನನ್ನ ತಂದೆ ಕಾಣೆಯಾಗಿದ್ದ ದಿನ ನಾನು ಊರಿನಲ್ಲಿ ಇರಲಿಲ್ಲ ಎಂದರೆ ಸರಿಯಲ್ಲ. ಶರತ್ ಕುಮಾರ್ ಇವರು ಅತ್ವಾಳ್ ರಸ್ತೆಯಲ್ಲಿ ಜಮೀನಿಗೆ ನನ್ನ ತಂದೆಯನ್ನು ಕರೆದುಕೊಂಡು ಹೋಗಿದ್ದರು. ಆ ಜಮೀನು ಊರಿನಿಂದ *500* ಮೀ ದೂರವಿದೆ. ಆ ಜಮೀನಿನಿಂದ *500* ಮೀ ದೂರದಲ್ಲಿ ಗಿರಿಯಯ್ಯನ ಮನೆ ಇದೆ. ನನ್ನ ತಂದೆ ಕಾಣೆಯಾಗಿದ್ದ ದಿನ ಶರತ್ ಕುಮಾರ್ ಇವರ ಮನೆ ಬಳಿ ಹೋದಾಗ ಅಲ್ಲಿ ನನ್ನ ತಂದೆ ಕೊಲೆ ಮಾಡಿದ್ದ ಬಗ್ಗೆ ಯಾವುದೇ ಗುರುತುಗಳು ಕಂಡುಬಂದಿರಲಿಲ್ಲ. ಆ ದಿನ ನಾವು ಕೊಲೆ ಮಾಡಿದ್ದ ಸ್ಥಳಕ್ಕೆ ಹೋಗಿರಲಿಲ್ಲ. ಮರುದಿನ ಪಂಚಾಯಿತಿ ಕಾಲಕ್ಕೆ ಶರತ್ ಕುಮಾರ್ ಇವರು ನೀವು ಏನಾನ್ನಾದರೂ ಮಾಡಿಕೊಳ್ಳಿ ನನ್ನನ್ನು ಏನನ್ನು ಮಾಡಿಕೊಳ್ಳಲು ಆಗುವುದಿಲ್ಲ ಎಂದು ಹೇಳಿದ್ದ ಬಗ್ಗೆ ಇದೇ ಮೊದಲ ಬಾರಿಗೆ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆ ದಿನ ಶರತ್ ಕುಮಾರ್ ಮತ್ತು ಮಲ್ಲಿಗಮ್ಮ ನಡುವೆ ಜಗಳ ನಡೆದ ಬಗ್ಗೆ ಪೋಲೀಸ್ ಮುಂದೆ ಹೇಳಿಲ್ಲ ಎಂದರೆ ಸರಿಯಲ್ಲ.

*10.* ದೂರನ್ನು ನನ್ನ ಅಣ್ಣ ಮತ್ತು ನಾನು ಸೇರಿಯೇ ಬರೆದಿದ್ದೇವೆ. ಈ ಮೇಲೆ ಹೇಳಿದ ವಿಷಯಗಳನ್ನು ದೂರಿನಲ್ಲಿ ಬರೆದಿಲ್ಲ ಎಂದರೆ ಸರಿಯಲ್ಲ. ಶರತ್ ಕುಮಾರ್ ನ ಅಕ್ಕನ ಮಗಳಿಗೆ ಮೈ ಮೇಲೆ ದೇವರು ಬಂದು ಹೇಳಿಕೆ ಕೊಟ್ಟ ಬಗ್ಗೆ ಪೋಲೀಸ್ ಮುಂದೆ ಹೇಳಿಲ್ಲ ಎಂದರೆ ಸರಿಯಲ್ಲ. ಶರತ್ ಕುಮಾರ್ ಮತ್ತು ಮಲ್ಲಿಗಮ್ಮಳಿಗೆ ಅನೈತಿಕ ಸಂಬಂದ ಇದ್ದ ಬಗ್ಗೆ ನಾನು

ಹೇಳಿಕೆ ಕೊಟ್ಟಿಲ್ಲ ಎಂದರೆ ಸರಿಯಲ್ಲ. ದೂರು ಕೊಟ್ಟ ದಿನ ಶರತ್ ಕುಮಾರ್ ಅನ್ನು ಪೋ.ಠಾಣೆಗೆ ಕರೆಸಿದ್ದರು ಎಂದರೆ ನಿಜ. ಆ ದಿನ ಅರ್ಧ ಗಂಟೆ ಪೋ.ಠಾಣೆಯಲ್ಲಿ ಕೂರಿಸಿ ವಾಪಸ್ಸು ಕಳುಹಿಸಿದ್ದರು. ನಂತರ ಮರುದಿನ ಅವರನ್ನು ಪುನಃ ಪೋ.ಠಾಣೆಗೆ ಕರೆದುಕೊಂಡು ಹೋಗಿ ಸಂಜೆ ವಾಪಸ್ಸು ಬಿಟ್ಟಿದ್ದರು. ದೂರು ಕೊಟ್ಟ ಮೂರು ದಿನಗಳ ಬಳಿಕ ಶರತ್ ಕುಮಾರ್, ಸುದರ್ಶನ್ ಇವರನ್ನು ಪೋ.ಠಾಣೆಯಲ್ಲೇ ಇಟ್ಟುಕೊಂಡಿದ್ದರು. ನನ್ನ ತಂದೆಯ ಶವ ದೊರೆತ ದಿನ ಕೆ.ಆರ್. ಆಸ್ಪತ್ರೆಯಲ್ಲಿ ನನ್ನ ಹೇಳಿಕೆ ಪಡೆದಿದ್ದರು ಎಂದರೆ ನಿಜ. ಆ ದಿನ ನಾನು ನನ್ನ ತಂದೆಯನ್ನು ಯಾರೋ ದುಷ್ಕರ್ಮಿಗಳು ಹಣಕಾಸಿನ ವಿಚಾರಕ್ಕೋ ಅನೈತಿಕ ಸಂಬಂದ ವಿಚಾರಕ್ಕೊ ಮದುವೆ ವಿಚಾರಕ್ಕೊ ಜಮೀನಿನ ವಿಚಾರಕ್ಕೊ ಅಥವಾ ಬೇರೆ ಕಾರಣಕ್ಕೊ ನನ್ನ ತಂದೆಯನ್ನು ಹರಿತವಾದ ಆಯುಧದಿಂದ ಕೊಲೆ ಮಾಡಿ ನಾಲೆಗೆ ಬಿಸಾಕಿದ್ದಾರೆ ಎಂದು ಹೇಳಿಕೆ ಕೊಟ್ಟಿದ್ದೆ ಎಂದರೆ ಸರಿಯಲ್ಲ. ಸದರಿ ಹೇಳಿಕೆಯನ್ನು ನಿ.ಡಿ-1 ಎಂದು ಗುರುತಿಸಿದೆ.

11. 6-7 ದಿನಗಳ ಬಳಿಕ ನನ್ನ ತಂದೆಯ ಶವ ಬಿದಿರುಗೂಡು ಬಳಿ ಸಿಕ್ಕಿದೆ ಎಂದು ಗೊತ್ತಾಗಿತ್ತು. ಆ ಬಗ್ಗೆ ವಾಟರ್ ಮ್ಯಾನ್ ನಾಗರಾಜು ಎನ್ನುವವರು ನನ್ನ ಅಣ್ಣನಿಗೆ ಪೋನ್ ಮಾಡಿ ತಿಳಿಸಿದ್ದರು. ಆ ನಂತರ ನಾವು ಆ ವಿಷಯವನ್ನು ಪೋಲೀಸರಿಗೆ ತಿಳಿಸಿದ್ದೆವು ಎಂದರೆ ನಿಜ. ಅಲ್ಲಿಯವರೆಗೆ ಪೋಲೀಸರಿಗೆ ನನ್ನ ತಂದೆಯ ಹೆಣ ಬಿದಿರುಗೂಡು ಬಳಿ ಇರುವ ಬಗ್ಗೆ ಗೊತ್ತಿರಲಿಲ್ಲ ಎಂದರೆ ನಿಜ. ವಾಟರ್ ಮ್ಯಾನ್ ನಾಗರಾಜು ಆ ವಿಷಯ ತಿಳಿಸಿದಾಗ ಶರತ್ ಕುಮಾರ್ ಪೋ.ಠಾಣೆಯಲ್ಲೇ ಇದ್ದ ಎಂದರೆ ನಿಜ. ರಾಮಪುರ ನಾಲೆ ಮತ್ತು ಬಿದಿರುಗೂಡು ಗ್ರಾಮ ಅಕ್ಕಪಕ್ಕದ ಎಲ್ಲಾ ಗ್ರಾಮಸ್ಥರಿಗೂ ಗೊತ್ತಿರುವ ಸ್ಥಳ ಎಂದರೆ ನಿಜ. ಮೇ ತಿಂಗಳಿನಲ್ಲಿ

ಸಹ ಜಮಿನಿಗೆ ನೀರು ಉಣಿಸಲು ನಾಲೆಗೆ ನೀರು ಬಿಟ್ಟಿರುತ್ತಾರೆ ಎಂದರೆ ನಿಜ. ನಾಲೆ ಅಕ್ಕಪಕ್ಕದಲ್ಲಿ ವ್ಯವಸಾಯದ ಜಮೀನು ಇವೆ ಮತ್ತು ಅಲ್ಲಿ ಯಾವಾಗಲೂ ಜನ ಇರುತ್ತಾರೆ ಎಂದರೆ ನಿಜ. ರಾಮಪುರ ನಾಲೆ ತುಂಬಾ ಆಳ ಇದೆ ಎಂದರೆ ನಿಜ. ನಾಲೆಯ ಹೂಳನ್ನು ಎತ್ತಿ ಬಹಳ ವರ್ಷಗಳಾಗಿದೆ ಎಂದರೆ ಗೊತ್ತಿಲ್ಲ. ಆ ನಾಲೆಯಲ್ಲಿ ಎತ್ತು, ಟ್ರಾಕ್ಟರ್ ಮತ್ತು ಬಟ್ಟೆಗಳನ್ನು ತೊಳೆಯುತ್ತಾರೆ ಎಂದರೆ ನಿಜ. ಹೆಣ ಸಿಕ್ಕ ಸ್ಥಳದಿಂದ 1 ಕಿ.ಮೀ ದೂರದಲ್ಲಿ ಆ್ಯಂಗುಲರ್, ಕುಡುಗೋಲು ಮತ್ತು ಪಂಚೆ ದೊರೆತಿತ್ತು. ಆ ವಸ್ತುಗಳು ದೊರೆತ ಸ್ಥಳದ ಪಕ್ಕದಲ್ಲಿ ರಾಮಪುರ ಗ್ರಾಮದ ಮಾದಯ್ಯನ ಜಮೀನು ಇದೆ. ನಾಲೆ ನೀರು ರಾಮಪುರ ಕಡೆಯಿಂದ ಬಿದಿರುಗೂಡು ಪಂಪ್ ಹೌಸ್ ಕಡೆಗೆ ಹೋಗುತ್ತದೆ.

12. ಪೋಲೀಸರು ನನಗೆ ದಿಃ07.06.2021 ರಂದು ನೋಟಿಸ್ ಕೊಟ್ಟಿದ್ದರು. ಆ ದಿನದಂದು ಮಹಜರ್ ಮಾಡಿದ್ದರು. ನಾನು ಮಹಜರ್ ಗೆ ರುಜು ಮಾಡಿಲ್ಲ. ನನ್ನ ಅಣ್ಣ ಸಹಿ ಮಾಡಿದ್ದಾರೆ. ದಿಃ07.06.2021 ರಂದು ಆ್ಯಂಗುಲರ್, ಕುಡುಗೋಲು ಮತ್ತು ಪಂಚೆ ಅಮಾನತ್ತು ಪಡಿಸಿಕೊಂಡಿದ್ದರು ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆ ಮೂರು ವಸ್ತುಗಳನ್ನು ನಾವೇ ಪೋ.ಠಾಣೆಗೆ ಸುಳ್ಳು ಸಾಕ್ಷಿ ಸೃಷ್ಟಿ ಮಾಡುವ ಸಲುವಾಗಿ ತೆಗೆದುಕೊಂಡು ಹೋಗಿ ಕೊಟ್ಟಿದ್ದೇವೆ ಎಂದರೆ ಸರಿಯಲ್ಲ. ಶರತ್ ಕುಮಾರ್ ಮತ್ತು ಮಲ್ಲಿಗಮ್ಮನ ಮನೆ ಒಂದೇ ರಸ್ತೆಯಲ್ಲಿದೆ ಎಂದರೆ ನಿಜ. ಶರತ್ ಕುಮಾರ್ ಇವರು ತಮ್ಮ ಹೆಂಡತಿ ಮಕ್ಕಳೊಂದಿಗೆ ಚೆನ್ನಾಗಿದ್ದಾರೆ ಎಂದರೆ ನಿಜ. ಶರತ್ ಕುಮಾರ್ ಮತ್ತು ಸುದರ್ಶನ್ ಇವರೇ ನನ್ನ ಅಣ್ಣನ ಮದುವೆಗೆ ತಯಾರಿ ಮಾಡುತ್ತಿದ್ದರು ಮತ್ತು ಬಟ್ಟೆ ಖರೀದಿ ಮಾಡಿ ಓಡಾಡುತ್ತಿದ್ದರು ಎಂದರೆ ಸರಿಯಲ್ಲ. ಬಸವಣ್ಣ ಎನ್ನುವವರು ಚುಂಚರಾಯನಹುಂಡಿ

ಗ್ರಾಮದವರು. ನಾನು ಬಸವಣ್ಣನವರ ಮನೆಗೆ ಹೋಗಿಲ್ಲ. ಸುದರ್ಶನ್ ಇವರು ನನ್ನ ತಂದೆ ಜೊತೆ ಬಸವಣ್ಣನವರ ಮನೆಗೆ ಹೋಗಿದ್ದರು ಎಂದರೆ ನನಗೆ ಗೊತ್ತಿಲ್ಲ. ಬಸವಣ್ಣನವರ ಮಧ್ಯಸ್ಥಿಕೆಯಲ್ಲಿ ಮಲ್ಲಿಗಮ್ಮ ತನ್ನ ಮಗಳನ್ನು ನನ್ನ ಅಣ್ಣನಿಗೆ ಕೊಡಲು ಒಪ್ಪಿಕೊಂಡಿದ್ದರು ಎಂದರ ನಿಜ. ಅದಕ್ಕೂ ಮುಂಚೆ ಅವರು ನಮ್ಮ ಸಂಬಂದಕ್ಕೆ ಒಪ್ಪಿರಲಿಲ್ಲ ಎಂದರೆ ನಿಜ. ನನ್ನ ಅಣ್ಣ ಪವನ್ ಕುಮಾರ್ ಮಲ್ಲಿಗಮ್ಮನ ಮಗಳು ಪೊಟೋ ತೆಗೆದುಕೊಂಡು ಬ್ಲಾಕ್ ಮೇಲ್ ಮಾಡುತ್ತಿದ್ದ ಎಂದರೆ ಸರಿಯಲ್ಲ. ಮಲ್ಲಿಗಮ್ಮನ ಮಗಳನ್ನು ಕೇಳುವ ಮಾತುಕತೆ ಕಾಲಕ್ಕೆ ನಾನು ಹೋಗಿದ್ದೆ. ಆ ಮಾತುಕತೆ *2021* ರ ಏಪ್ರಿಲ್ ತಿಂಗಳಲ್ಲಿ ನಡೆದಿತ್ತು.

**ಈ ವೇಳೆಗೆ ಊಟದ ಸಮಯವಾಗಿದ್ದರಿಂದ ಮದ್ಯಾಹ್ನಕ್ಕೆ ಮುಂದೂಡಲಾಯಿತು**

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.

*ಓ ಹೇ ಕೇ ಸ ಇ ಎ ಒ.,*

*4 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,*
ಮೈಸೂರು

**ನ್ಯಾಯಾಲಯದ ಆದೇಶದ ಮೇರೆಗೆ ಸಾಕ್ಷಿಯನ್ನು ಮದ್ಯಾಹ್ನ ಪುನಃ ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತುಃ**

**ಪಾಟೀ ಸವಾಲುಃ *1*ನೇ ಆರೋಪಿತರ ಪರ ವಕೀಲರಾದ ಶ್ರೀ ಸಿ.ಎಂ.ಜೆ ರವರಿಂದಃ**

13. ನನ್ನ ತಂದೆಯ ಮೃತ ದೇಹ ಸಿಕ್ಕ ಮರುದಿನ ಶರತ್ ಕುಮಾರ್ ಇವರನ್ನು ಕಣ್ಣಿಗೆ ಬಟ್ಟೆ ಕಟ್ಟಿ ಪೋ.ಠಾಣೆ ಬಳಿ ಕರೆದುಕೊಂಡು ಬಂದಿದ್ದರು. ಆ ದಿನ ನನ್ನ ಹೇಳಿಕೆ ಪಡೆದಿದ್ದಾರೆ. ಆದಾದ ನಂತರ ಎರಡು ಬಾರಿ ಪೋ.ಠಾಣೆಗೆ ಹೋಗಿದ್ದೇನೆ. ಅವರ ಕಣ್ಣಿಗೆ ಬಟ್ಟೆ ಕಟ್ಟಿದಾಗ ನನ್ನ ಹೇಳಿಕೆ ಪಡೆದ ಕುರಿತು ಹೇಳಿಕೆಯಲ್ಲಿ ಹೇಳಿದ್ದೇನೆ. ಶರತ್ ಕುಮಾರ್ ಹೇಳಿಕೆ ಪಡೆಯುವ ಕಾಲಕ್ಕೆ ನಾನು ಮತ್ತು ನನ್ನ ಅಣ್ಣ ಹಾಜರಿದ್ದೆವು. ಶರತ್ ಕುಮಾರ್ ಇವರೇ ಕೊಲೆ ಮಾಡಿದ್ದನ್ನು ಒಪ್ಪಿಕೊಂಡಿದ್ದರು ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಶರತ್ ಕುಮಾರ್ ಮತ್ತು ಮಲ್ಲಿಗಮ್ಮಳ ಅನೈತಿಕ ಸಂಬಂದಕ್ಕೆ ಅನಾನುಕೂಲವಾಗುತ್ತದೆ ಎನ್ನುವ ಕಾರಣಕ್ಕೆ ದಿಃ28.05.2021 ರಂದು ನನ್ನ ತಂದೆಯನ್ನು ಗೌರಮ್ಮನ ಮನೆಯಿಂದ ಕರೆದುಕೊಂಡು ಹೋಗಿ ಅವರ ಜಮೀನಿನಲ್ಲಿ ಹೊಡೆದು ಸಾಯಿಸಿದ್ದಾರೆ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ದೆವ್ವ ಆಗಬಹುದು ಎನ್ನುವ ಹೆದರಿಕೆಯಿಂದ ಎರಡು ಹಿಮ್ಮಡಿಗಳನ್ನು ಕೊಚ್ಚಿ ಶರತ್ ಕುಮಾರ್ ಮತ್ತು ಮದು ಇವರು ನನ್ನ ತಂದೆಯ ಹೆಣವನ್ನು ನಾಲೆಗೆ ಹಾಕಿದ್ದಾರೆ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

***14.*** ಶರತ್ ಕುಮಾರ್ ಇವರು ಕೃಷಿ ಕೆಲಸ ಇಲ್ಲದೇ ಇದ್ದಾಗ ಟ್ರಾಕ್ಟರ್ ಅನ್ನು ಅವರ ಜಮೀನಿನ ಹತ್ತಿರ ನಿಲ್ಲಿಸಿಕೊಳ್ಳುತ್ತಿದ್ದರು ಎಂದರೆ ನಿಜ. ಬೈಕ್ ಅನ್ನು ಸಹ ಅವರು ಅವರ ಸೈಟ್ ಹತ್ತಿರ ನಿಲ್ಲಿಸುತ್ತಿದ್ದರು. ಬೈಕ್ ಮತ್ತು ಟ್ರಾಕ್ಟರ್ ಗಳು ಈ ಪ್ರಕರಣಕ್ಕೆ ಯಾವುದೇ ರೀತಿ ಸಂಬಂದ

ಇಲ್ಲದೇ ಇದ್ದರು ನಾನು ಸುಳ್ಳು ಹೇಳಿಕೆ ಕೊಟ್ಟು ಅವುಗಳನ್ನು ಈ ಪ್ರಕರಣಕ್ಕೆ ಸೇರಿಸಿದ್ದೆ ಎಂದರೆ ಸರಿಯಲ್ಲ. ನನ್ನ ತಂದೆ ಸಾವಿಗೂ ಶರತ್ ಕುಮಾರ್ ನಿಗೂ ಯಾವುದೇ ರೀತಿ ಸಂಬಂದ ಇಲ್ಲ ಎಂದರೆ ಸರಿಯಲ್ಲ. ನನ್ನ ತಂದೆ ಸೋಮಣ್ಣ, ಗಿರಿಯಯ್ಯ, ವೃಷಬೇಂದ್ರ ಇವರೊಂದಿಗೆ ಚೆನ್ನಾಗಿದ್ದರು ಎಂದರೆ ನಿಜ. ನನ್ನ ತಂದೆ ಅವರೊಂದಿಗೆ ಬೇರೆ ಬೇರೆ ಕಡೆ ಓಡಾಡುತ್ತಿದ್ದರು ಎಂದರೆ ನಿಜ. ಅವರ ಚುನಾವಣೆ ಕಾಲಕ್ಕೂ ಸಹ ನನ್ನ ತಂದೆ ಮುಂದಾಳತ್ವ ವಹಿಸಿದ್ದರು ಎಂದರೆ ಸರಿಯಲ್ಲ. ನನ್ನ ತಂದೆಗೆ ಕುಡಿಯುವ ಅಭ್ಯಾಸ ಇತ್ತು ಎಂದರೆ ಸರಿಯಲ್ಲ. ಸುಗುಣ ಇವರ ಜಮೀನನ್ನು ನನ್ನ ತಂದೆ ಸಾಗುವಳಿ ಮಾಡುತ್ತಿದ್ದರು ಎಂದರೆ ನಿಜ. ಸುಗುಣ ಮತ್ತು ಅವರ ತಂದೆ ನನ್ನ ತಂದೆಗೆ ಆಸ್ತಿ ವರ್ಗಾವಣೆ ಮಾಡಿರಲಿಲ್ಲ ಎಂದರೆ ನಿಜ. ಸುಗುಣ ಇವರ ಮನೆಯವರು ಆಗಾಗ ಜಮೀನು ಬಿಟ್ಟು ಕೊಡಿ ಎಂದು ನನ್ನ ತಂದೆಗೆ ಒತ್ತಾಯ ಮಾಡುತ್ತಿದ್ದರು ಎಂದರೆ ಸರಿಯಲ್ಲ. ಶಿವಪ್ಪ ಇವರ ಮಗ ಮಂಜು ಜಮೀನು ಮತ್ತು ನಮ್ಮ ಜಮೀನು ಅಕ್ಕಪಕ್ಕ ಇದೆ ಎಂದರೆ ನಿಜ. ಅವರ ಜಮೀನನ್ನು ನಮ್ಮ ತಂದೆ ಒತ್ತುವರಿ ಮಾಡಿದ್ದರು ಎಂದರೆ ಸರಿಯಲ್ಲ. ಪುಟ್ಟಪ್ಪನ ಮಗ ಮೂರ್ತಿಗೂ ನನ್ನ ತಂದೆಗೂ ಜಮೀನಿನ ವಿಷಯಕ್ಕೆ ವಿವಾದ ಇತ್ತು ಎಂದರೆ ಸರಿಯಲ್ಲ. ಜಮೀನು ವ್ಯಾಜ್ಯ ಇದುದ್ದರಿಂದ ನಮ್ಮ ತಂದೆಗೆ ಆಗದೇ ಇದ್ದವರು ಬಹಳ ಜನ ಇದ್ದರು ಎಂದರೆ ಸರಿಯಲ್ಲ. ಅದೇ ಕಾರಣಕ್ಕೆ ಮೊದಲಿಗೆ ದೂರು ಕೊಡುವಾಗ ಜಮೀನಿನ ವಿಷಯಕ್ಕೆ ಕೊಲೆಯಾಗಿರಬಹುದು ಎಂದು ಹೇಳಿದ್ದೇವು ಎಂದರೆ ಸರಿಯಲ್ಲ.

15. ನಾಲೆಯಿಂದ ತೆಗೆದಾಗ ಪಂಚೆಗೆ ಕೆಸರಾಗಿತ್ತು ಎಂದರೆ ನಿಜ. ಕುಡುಗೋಲು ಮತ್ತು ಆ್ಯಂಗಲರ್ ಸಹ ಕೊಳೆಯಾಗಿತ್ತು ಎಂದರೆ ಸರಿಯಲ್ಲ. ಎಂ.ಒ 1 ರಿಂದ 3 ಒಂದೇ ಜಾಗದಲ್ಲಿ ದೊರೆತಿದ್ದವು. ಮಲ್ಲಿಗಮ್ಮ ಶರತ್ ಕುಮಾರ್ ಗೆ ನನ್ನ ತಂದೆಯನ್ನು ಕೊಲೆ ಮಾಡುವಂತೆ

ಹೇಳಿದಾಗ ನಾನು ಹಾಜರಿರಲಿಲ್ಲ. ಮಲ್ಲಿಗಮ್ಮ ಆ ರೀತಿ ಹೇಳಿಲ್ಲ ಮತ್ತು ಆ ಬಗ್ಗೆ ನಾನು ಪೋಲೀಸರ ಮುಂದೆ ಹೇಳಿಲ್ಲ ಎಂದರೆ ಸರಿಯಲ್ಲ. ಪೋಲೀಸರು ನನ್ನ ಸಮಕ್ಷಮ ಶರತ್ ಕುಮಾರ್ ಹೇಳಿಕೆ ಪಡೆದಿದ್ದರು ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಶರತ್ ಕುಮಾರ್ ಇವರ ಮೇಲಿನ ದ್ವೇಷದಿಂದ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**2 ಮತ್ತು 3 ನೇ ಆರೋಪಿತರ ಪರ ವಕೀಲರು ಈ ಮೇಲಿನಂತೆ ಪಾಟೀ ಸವಾಲನ್ನು ಅಳವಡಿಸಿಕೊಂಡಿರುತ್ತಾರೆ.**

**ಮರು ವಿಚಾರಣೆಃ– ಇಲ್ಲ.**

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.

*ಓ ಹೇ ಕೇ ಸ ಇ ಎ ಒ.,*

*4 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,*
**ಮೈಸೂರು**